ಸಾಹಿತ್ಯ ಚಟುವಟಿಕೆಗಳು ನನಗೆ ಹೊಸದನ್ನು ಅನ್ವೇಷಿಸುವುದಕ್ಕೆ ಪ್ರೇರಣೆ. ಕವಿತೆಗಳ ವಾಚನವನ್ನು ಅವರೇ ನನಗೆ ಹೇಳಿಕೊಟ್ಟಿದ್ದರು. ಈ ಕಾವ್ಯಲಯವು ನನಗೆ ಬರೆಯುವುದಕ್ಕೂ ಶಕ್ತಿ ನೀಡಿತು. ಅಪ್ಪ–ಅಮ್ಮ ಮತ್ತು ನನ್ನ ಅವಳಿ ಸೋದರಿಯರು ನನ್ನೊಡನೆ ಸದಾ ನಿಂತಿದ್ದಾರೆ. ಯಾವುದೇ ಪೂರ್ವಸಿದ್ಧತೆ, ಯೋಚನೆ ಇಲ್ಲದೆ ನಾನು ಮಾತೃಭಾಷೆಯಲ್ಲಿ ಬರೆಯಲಾರಂಭಿಸಿದೆ. ನನ್ನ ಮಾತೃಭಾಷೆಯಲ್ಲಿಯೇ ಶಿಕ್ಷಣ ಪಡೆದೆ. ಇಂಗ್ಲಿಷ್ ಪುಸ್ತಕಗಳನ್ನು ಓದುವ ಅವಕಾಶ ಪ್ರೌಢಶಾಲೆಯಲ್ಲಿ ಸಿಕ್ಕಿತು. ನಾನು ಇಂಗ್ಲಿಷ್‌ನಲ್ಲೂ ಬರೆಯುತ್ತೇನೆ. ಆದರೆ ಹೆಚ್ಚಾಗಿ ಮಲಯಾಳಂನಲ್ಲಿ ಬರೆಯುವುದನ್ನೇ ಆಯ್ಕೆ ಮಾಡಿಕೊಳ್ಳುತ್ತೇನೆ.

**5** ನಾನೊಂದು ಕವನವನ್ನು ಓದುವಾಗ ನನ್ನ ಪ್ರಜ್ಞೆಗೆ ನ್ಯಾಯವೊದಗಿಸಿದ ಭಾವವುಂಟಾಗುತ್ತದೆ. ಇದು ಅಪ್ರಜ್ಞಾಪೂರ್ವಕವಾಗಿ ಪ್ರಭಾವ ಬೀರಿ ನಮ್ಮ ಬದುಕಿನ ಭಾವವನ್ನು ಹಾಗೂ ಜೀವನಮಟ್ಟವನ್ನು ಸುಧಾರಿಸುತ್ತದೆ. ಓದುವ ಮೂಲಕ ನಾವು ನಮ್ಮದೇ ಅಸ್ತಿತ್ವವನ್ನು ಹಾಗೂ ಸತ್ವವನ್ನು ಕಂಡುಕೊಳ್ಳುತ್ತೇವೆ. ಎಲ್ಲ ಸಹೃದಯರೂ ಒಂದು ಪುಸ್ತಕದ ಮುಂದೆ ಇದೇ ಭಾವವನ್ನು ಅನುಭವಿಸುತ್ತಾರೆ. ಇದು ಸಾಹಿತ್ಯದ 'ಕಥಾರ್ಸಿಸ್' ಮತ್ತು ಇದು ವ್ಯಕ್ತಿಯಲ್ಲಿ ಸೂಕ್ಷ್ಮವಾದ ಬದಲಾವಣೆಯನ್ನು ತರಬಲ್ಲುದು; ಅಂದಮೇಲೆ ಅದು ಪ್ರಭಾವಿಸುತ್ತದೆ ಎಂಬುದು ಸತ್ಯವೇ. ಸಾಹಿತ್ಯವು ಬದುಕಿನ ಅವಿಭಾಜ್ಯ ಅಂಗವಾಗಿದೆ. ಅದು ಪ್ರಜ್ಞೆಯನ್ನು ಎತ್ತರಕ್ಕೇರಿಸಲು ಇರುವ ಸಾಮಾಜಿಕ ವೇಗವರ್ಧಕ.

**6** ನಾನು ಬಾಲ್ಯದಲ್ಲಿ ಶಾಸ್ತ್ರೀಯ ಸಂಗೀತ ಕಲಿತಿದ್ದೇನೆ. ಕರ್ನಾಟಕ ಶಾಸ್ತ್ರೀಯ ಸಂಗೀತವು ಕನ್ನಡದಲ್ಲಿಯೇ ಇರುತ್ತದೆ ಎಂದು ಆಗ ನಾನು ಭಾವಿಸಿದ್ದೆ. ಅಂದರೆ ಮುಗ್ಧ ಬಾಲಕಿಯಾಗಿದ್ದಾಗ ನಾನು ಸಂಸ್ಕೃತ, ತೆಲುಗು ಮತ್ತು ತಮಿಳು ಭಾಷೆಯನ್ನೂ ಕನ್ನಡವೆಂದೇ ಭಾವಿಸಿದ್ದೆ. ನಿಧಾನವಾಗಿ ಈ ಭಾಷೆಗಳ ವೈವಿಧ್ಯ ಮತ್ತು ಸಂಪ್ರದಾಯಗಳು ಅರ್ಥವಾಗತೊಡಗಿತು. ಗಿರೀಶ ಕಾರ್ನಾಡ್ ನನ್ನ ಬಹಳ ಇಷ್ಟದ ಲೇಖಕರು. ಅವರ 'ಯಯಾತಿ', 'ಹಯವದನ' ಕೃತಿಗಳ ಪರಿಕಲ್ಪನೆ, ಕಥಾಹಂದರಗಳು ಬಹಳ ಆಸಕ್ತಿದಾಯಕವಾಗಿವೆ. ಸುಧಾ ಮೂರ್ತಿಯವರ ಕೃತಿಗಳನ್ನೂ ಇಷ್ಟಪಟ್ಟು ಓದುತ್ತೇನೆ. ಇಂಗ್ಲಿಷ್‌ನಲ್ಲಿ ಬರೆದರೂ ಅವರು ಭಾರತೀಯ ಓದುಗವರ್ಗವನ್ನು ತಲುಪುವ ಸಾಂಸ್ಕೃತಿಕ ಹಿನ್ನೆಲೆ ಹೊಂದಿದ್ದಾರೆ. ಯು.ಆರ್. ಅನಂತ ಮೂರ್ತಿ ಅವರ ಕೃತಿಗಳ ಅಭಿಮಾನಿ ನಾನು. ಅವರು ನಾನೋದಿದ ವಿಶ್ವವಿದ್ಯಾಲಯದ ಉಪಕುಲಪತಿಗಳಾಗಿದ್ದರು. 'ಸಂಸ್ಕಾರ' ನನ್ನ ಇಷ್ಟದ ಕೃತಿಗಳಲ್ಲೊಂದು. ಯಕ್ಷಗಾನ ಕಲಾಪ್ರಕಾರವನ್ನು ಕುತೂಹಲದಿಂದ ಗಮನಿಸುವೆ. ಕರ್ನಾಟಕದ ರಂಗಭೂಮಿ ಚಟುವಟಿಕೆಗಳ ಬಗ್ಗೆ ಪ್ರೀತಿಯಿದೆ. ಚಂದ್ರಶೇಖರ ಕಂಬಾರರ ಸಾಹಿತ್ಯ ಕೃತಿಗಳು ಕನ್ನಡಕ್ಕೆ ಮತ್ತೊಂದು ಪ್ರವೇಶದ್ವಾರವನ್ನು ಒದಗಿಸಿಕೊಟ್ಟಿವೆ.

**7** ಮಲಯಾಳಂ ಧ್ವನಿಪೂರ್ಣವಾದ ಸುಂದರ ಭಾಷೆ. ನಾವು ಏನನ್ನು ಬರೆಯುತ್ತೇವೆಯೊ ಅದನ್ನೇ ಉಚ್ಚರಿಸುತ್ತೇವೆ. ಆದ್ದರಿಂದ ಉಚ್ಚಾರಣೆ ಮತ್ತು ವ್ಯತ್ಯಾಸಗಳು ಇಲ್ಲಿ ಬಹಳ ಮುಖ್ಯ. ನಮ್ಮ ಭಾಷೆಯ ಮೇಲೆ ಸಂಸ್ಕೃತ ಮತ್ತು ತಮಿಳಿನ ನೇರ ಪ್ರಭಾವವಿದೆ. ಮಲಯಾಳಂನಲ್ಲಿಯೂ ಅನೇಕ ಉಪಭಾಷೆಗಳಿವೆ. ಸಾಹಿತ್ಯಿಕವಾಗಿ ಹಲವು ಮಂದಿ ಬರಹಗಾರರು ತಮ್ಮ ಅಭಿವ್ಯಕ್ತಿಯನ್ನು ಸರಳ ಭಾಷೆಯ ಮೂಲಕ ಯಶಸ್ವಿಯಾಗಿ ಮಾಡಿದ್ದಾರೆ. ವೈಕಂ ಮುಹಮ್ಮದ್ ಬಶೀರ್ ಅವರ ಉದಾಹರಣೆಯನ್ನು ಕೊಡಲೇಬೇಕು. ಅವರ ಕೃತಿಯ ಪಾತ್ರಗಳು ಆಡಂಬರದ ಮತ್ತು ನಿಷ್ಠುರದ ಪದ ಬಳಕೆಯನ್ನು ವಿಡಂಬನೆ ಮಾಡುತ್ತವೆ. ಅವರು ಮಲಯಾಳಂ ಉಪಭಾಷೆಯಲ್ಲಿ ಸಂವಹನ ಮಾಡುತ್ತಿದ್ದರು. ಹಾಗೆ ನೋಡಿದರೆ, ದಕ್ಷಿಣ ಭಾರತದ ಭಾಷೆಗಳ ಲಿಪಿ ಮತ್ತು ಧ್ವನಿ ಒಂದೇ ತೆರನಾದವು.

ನಾನು ಮೂರು ತಲೆಮಾರಿಗೆ ಸಂಬಂಧಿಸಿದ ಮಹಿಳಾ ಬೌದ್ಧಿಕತೆಯ ಕುರಿತು ಬರೆಯುತ್ತಿದ್ದೇನೆ. ಇಲ್ಲಿ ನಾನು ಮಹಿಳೆಯನ್ನು ಒಂದು ಲಿಂಗತ್ವದ ಪರಿಕಲ್ಪನೆಯಾಗಿ ಪರಿಗಣಿಸುತ್ತೇನೆಯೇ ಹೊರತು ಅದೊಂದು ಮಿತಿ ಎಂದು ಪರಿಗಣಿಸುತ್ತಿಲ್ಲ.